**All India Radio: Bangalore**
**National Bulletin In Kannada**
**22.11.2025 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**22.11.2025 1.10 p.m.**

**<><><><>**

ಮುಖ್ಯಾಂಶಗಳು

1. ಜೋಹಾನ್ಸ್‌ಬರ್ಗ್‌ನಲ್ಲಿಂದು ಜಿ-೨೦ ನಾಯಕರ ಶೃಂಗಸಭೆ ಆರಂಭ; ಭಾರತದ ದೃಷ್ಟಿಕೋನ ಮಂಡಿಸಲಿರುವ ಪ್ರಧಾನಿ ನರೇಂದ್ರ ಮೋದಿ
2. ನೂತನ ಕಾರ್ಮಿಕ ಸಂಹಿತೆಗಳನ್ನು ಸ್ವಾಗತಿಸಿದ ಕೈಗಾರಿಕಾ ಹಾಗೂ ಸಲಹಾ ಸಂಸ್ಥೆಗಳು; ಅತಿದೊಡ್ಡ ಸುಧಾರಣೆಯೆಂದು ಬಣ್ಣನೆ
3. ನವದೆಹಲಿಯಲ್ಲಿಂದು ಸರ್ದಾರ್@೧೫೦ ಏಕತಾ ಓಟಕ್ಕೆ ಕೇಂದ್ರ ಸಚಿವ ಜೆ.ಪಿ. ನಡ್ಡಾ ಹಸಿರುನಿಶಾನೆ
4. ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್: ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಲಕ್ಷ್ಯಸೇನ್ ಫೈನಲ್‌ಗೆ ಲಗ್ಗೆ
5. ಟೆಸ್ಟ್ ಕ್ರಿಕೆಟ್: ಗುವಾಹತಿಯಲ್ಲಿಂದು ಸರಣಿಯ ಎರಡನೇ ಪಂದ್ಯದಲ್ಲಿ ಭಾರತ-ದಕ್ಷಿಣ ಆಫ್ರಿಕಾ ಮುಖಾಮುಖಿ

<><><><>

ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿಂದು ಆರಂಭವಾಗಲಿರುವ ಜಿ೨೦ ನಾಯಕರ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಮೂರು ದಿನಗಳ ಈ ಸಭೆಯಲ್ಲಿ, ಪ್ರಧಾನಿ ಅವರು ಎಲ್ಲಾ ಅಧಿವೇಶನಗಳಲ್ಲಿ ಭಾಗವಹಿಸಿ ಜಾಗತಿಕ ದಕ್ಷಿಣ ಸವಾಲುಗಳು, ಸುಸ್ಥಿರ ಅಭಿವೃದ್ಧಿ, ಹವಾಮಾನ ಕ್ರಮ, ಇಂಧನ ಪರಿವರ್ತನೆ ಮತ್ತು ಜಾಗತಿಕ ಆಡಳಿತದಲ್ಲಿನ ಸುಧಾರಣೆಗಳು ಸೇರಿದಂತೆ ಭಾರತದ ಪ್ರಮುಖ ಆದ್ಯತೆಗಳನ್ನು ಪ್ರಸ್ತುತಪಡಿಸಲಿದ್ದಾರೆ. ೨೦೧೪ ರಲ್ಲಿ ಅಧಿಕಾರ ವಹಿಸಿಕೊಂಡ ನಂತರ ಪ್ರಧಾನಿ ಮೋದಿಯವರ ೧೨ನೇ ಜಿ-೨೦ ಶೃಂಗಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇದೇ ಮೊದಲ ಬಾರಿಗೆ ಆಫ್ರಿಕ ಖಂಡದಲ್ಲಿ ಶೃಂಗಸಭೆಯನ್ನು ಆಯೋಜಿಸಲಾಗುತ್ತಿರುವ ಈ ವರ್ಷದ ಸಭೆ ವಿಶೇಷ ಮಹತ್ವವನ್ನು ಹೊಂದಿದೆ. ೨೦೨೫ ರ

ವಿಷಯ "ಸದೃಢತೆ, ಸಮಾನತೆ ಮತ್ತು ಸುಸ್ಥಿರತೆ". ದಕ್ಷಿಣ ಆಫ್ರಿಕಾ ತನ್ನ ಅಧ್ಯಕ್ಷತೆಯಲ್ಲಿ, ವಿಪತ್ತು ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವುದು, ಕಡಿಮೆ ಆದಾಯದ ದೇಶಗಳಿಗೆ ಸಾಲ ಸುಸ್ಥಿರತೆಯನ್ನು ಖಚಿತಪಡಿಸುವುದು, ನ್ಯಾಯಯುತ ಇಂಧನ ಪರಿವರ್ತನೆಗಾಗಿ ಹಣಕಾಸು ಸಜ್ಜುಗೊಳಿಸುವುದು ಮತ್ತು ಸಮಗ್ರ ಮತ್ತು ಸುಸ್ಥಿರ ಬೆಳವಣಿಗೆಯನ್ನು ಉತ್ತೇಜಿಸಲು ನಿರ್ಣಾಯಕ ಖನಿಜಗಳನ್ನು ಬಳಸಿಕೊಳ್ಳುವುದು ಸೇರಿದಂತೆ ಪ್ರಮುಖ ಆದ್ಯತೆಗಳ ಮೇಲೆ ಕೇಂದ್ರೀಕರಿಸಿದೆ. ಮೂರು ದಿನಗಳ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಿ ಮೋದಿ ನಿನ್ನೆ ಸಂಜೆ ಜೋಹಾನ್ಸ್‌ಬರ್ಗ್‌ಗೆ ಆಗಮಿಸಿದರು.

<><><>

ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ಆಯೋಜಿಸಲಾಗಿರುವ ಜಿ೨೦ ಶೃಂಗಸಭೆಯ ನೇಪಥ್ಯದಲ್ಲಿ ನಿನ್ನೆ ಪ್ರಧಾನಿ ನರೇಂದ್ರ ಮೋದಿ ಅವರು ಆಸ್ಟ್ರೇಲಿಯಾದ ಪ್ರಧಾನಿ ಆಂಥೋನಿ ಅಲ್ಬನೀಸ್ ಅವರೊಂದಿಗೆ ಮಾತುಕತೆ ನಡೆಸಿದರು. ಪ್ರಧಾನಿ ಮೋದಿ ಅವರು ದಕ್ಷಿಣ ಆಫ್ರಿಕಾದ ಬಹುರಾಷ್ಟ್ರೀಯ ಇಂಟರ್ನೆಟ್ ಮತ್ತು ತಂತ್ರಜ್ಞಾನ ಕಂಪನಿ, ನಾಸ್ಪರ್ಸ್‌ನ ಅಧ್ಯಕ್ಷ ಕೂಸ್ ಬೆಕ್ಕರ್ ಮತ್ತು ಸಿಇಒ ಫ್ಯಾಬ್ರಿಸಿಯೊ ಬ್ಲೋಸಿ ಅವರೊಂದಿಗೆ ಸಭೆ ನಡೆಸಿದರು. ಭಾರತದ ಡಿಜಿಟಲ್ ಪರಿಸರ ವ್ಯವಸ್ಥೆ, ಎಐ, ಸ್ಟಾರ್ಟ್‌ಅಪ್ ಮತ್ತು ಬಾಹ್ಯಾಕಾಶ ವಲಯಗಳಲ್ಲಿ ಹೂಡಿಕೆಗಳನ್ನು ವಿಸ್ತರಿಸುವ ಮತ್ತು ಗ್ರಾಹಕ ಮಾರುಕಟ್ಟೆ ಮತ್ತು ತಂತ್ರಜ್ಞಾನದಲ್ಲಿ ಹೊಸ ಮಾರ್ಗಗಳನ್ನು ಅನ್ವೇಷಿಸುವ ಬಗ್ಗೆ ಅವರು ಚರ್ಚಿಸಿದರು. ಪ್ರಧಾನಿ ಅವರು ಜೋಹಾನ್ಸ್‌ಬರ್ಗ್‌ನಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿರುವ ಭಾರತೀಯ ಮೂಲದ ತಂತ್ರಜ್ಞಾನ ಉದ್ಯಮಿಗಳು ಮತ್ತು ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಂವಾದ ನಡೆಸಿದರು ಮತ್ತು ಭಾರತದೊಂದಿಗೆ ತಮ್ಮ ಸಂಬಂಧವನ್ನು ಇನ್ನಷ್ಟು ಗಾಢವಾಗಿಸುವಂತೆ ಕರೆ ನೀಡಿದರು. ವಿವಿಧ ಸಮುದಾಯ ಸಂಸ್ಥೆಗಳೊಂದಿಗೆ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿರುವ ಭಾರತೀಯ ಸಮುದಾಯದ ಸದಸ್ಯರನ್ನು ಸಹ ಪ್ರಧಾನಿ ಭೇಟಿಯಾದರು. ದಕ್ಷಿಣ ಆಫ್ರಿಕಾದಲ್ಲಿ ಭಾರತವನ್ನು ತಿಳಿಯಿರಿ ರಸಪ್ರಶ್ನೆಯ ವಿಜೇತರನ್ನು ಪ್ರಧಾನಿ ಭೇಟಿಯಾದರು.

<><><>

ಜಿ-೨೦ ರಾಷ್ಟ್ರಗಳು ಜಾಗತಿಕ ಬಳಲುವಿಕೆಯನ್ನು ಕಡಿಮೆ ಮಾಡಲು ತಮ್ಮ ಶಕ್ತಿಯನ್ನು ವಿನಿಯೋಗಿಸಬೇಕು ಎಂದು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್

ಹೇಳಿದ್ದಾರೆ. ಜಿ-೨೦ ನಾಯಕರ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಜೋಹಾನ್ಸ್‌ಬರ್ಗ್‌ಗೆ ಆಗಮಿಸಿದ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜಿ-೨೦ ರಾಷ್ಟ್ರಗಳು ಜಗತ್ತನ್ನು ಹೆಚ್ಚು ಶಾಂತಿಯುತ ಹಾದಿಯಲ್ಲಿರಿಸುವ ಸಾಮರ್ಥ್ಯ ಹೊಂದಿವೆ. ಶೃಂಗಸಭೆಯ ವೇಳೆ ಅಗತ್ಯವಿರುವ ಕ್ರಮದೊಂದಿಗೆ ಮುನ್ನಡೆಯಲು ಜಿ-೨೦ ಸದಸ್ಯರಿಗೆ ಕರೆ ನೀಡುವುದಾಗಿ ತಿಳಿಸಿದ್ದಾರೆ. ಇಂದು ಜಾಗತಿಕ ಸಂಸ್ಥೆಗಳಲ್ಲಿ ಆಫ್ರಿಕಾ ಕಡಿಮೆ ಪ್ರಾತಿನಿಧ್ಯವನ್ನು ಹೊಂದಿದ್ದು, ಇದು ಬದಲಾಗಬೇಕಿದೆ ಎಂದರು.

<><><><>

ದೇಶದಲ್ಲಿ ಅಸ್ತಿತ್ವದಲ್ಲಿರುವ ದಶಕಗಳಷ್ಟು ಹಳೆಯ ಕಾರ್ಮಿಕ ಕಾನೂನುಗಳನ್ನು ಸರಳೀಕರಿಸುವ ಮತ್ತು ಸುವ್ಯವಸ್ಥಿತಗೊಳಿಸುವ ಗುರಿಯನ್ನು ಹೊಂದಿರುವ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳ ಅನುಷ್ಠಾನವನ್ನು ಕೇಂದ್ರ ಸರ್ಕಾರ ನಿನ್ನೆ ಘೋಷಿಸಿತು. ಈ ಘೋಷಣೆಯನ್ನು ಕೈಗಾರಿಕಾ ಸಂಸ್ಥೆಗಳು ಮತ್ತು ವಿವಿಧ ಸಲಹಾ ಸಂಸ್ಥೆಗಳು ಸ್ವಾಗತಿಸಿದ್ದು, ಈ ಕ್ರಮ ಔಪಚಾರಿಕ ಉದ್ಯೋಗ ಸೃಷ್ಟಿ ಹೆಚ್ಚಿಸುವ, ಸಾಮಾಜಿಕ ಭದ್ರತಾ ಜಾಲ ವಿಸ್ತರಿಸುವ ಮತ್ತು ಪ್ರಕ್ರಿಯೆಗಳನ್ನು ಸರಳೀಕರಣಗೊಳಿಸುವ ಮೈಲಿಗಲ್ಲಾಗಿದೆ ಎಂದು ಕರೆದಿವೆ. ಭಾರತೀಯ ಕಾರ್ಮಿಕ ಸಂಘ, ಈ ಕ್ರಮವನ್ನು ಶ್ಲಾಘಿಸಿದೆ. ಸ್ವಾತಂತ್ರ್ಯಾ ನಂತರ ಕಾರ್ಮಿಕರ ಪರವಾಗಿ ತೆಗೆದುಕೊಂಡ ಅತಿದೊಡ್ಡ ಸುಧಾರಣೆ ಇದಾಗಿದೆ ಎಂದು ಸಂಘದ ರಾಷ್ಟ್ರೀಯ ಕಾರ್ಯದರ್ಶಿ ಗಿರೀಶ್ ಆರ್ಯ ಹೇಳಿದ್ದಾರೆ. ಭಾರತದಲ್ಲಿ ಕಾರ್ಮಿಕ ಸಂಹಿತೆಗಳ ಅನು?ನವನ್ನು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಮಹಾನಿರ್ದೇಶಕ ಗಿಲ್ಬರ್ಟ್ ಎಫ್ ಹೌಂಗ್ಬೊ ಸ್ವಾಗತಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಸಾಮಾಜಿಕ ರಕ್ಷಣೆ ಮತ್ತು ಕನಿ? ವೇತನ ಸೇರಿದಂತೆ ಘೋಷಿಸಲಾದ ಭಾರತದ ಹೊಸ ಕಾರ್ಮಿಕ ಸಂಹಿತೆಗಳ ಬೆಳವಣಿಗೆಗಳನ್ನು ಆಸಕ್ತಿಯಿಂದ ಅನುಸರಿಸುತ್ತಿರುವುದಾಗಿ ಅವರು ಹೇಳಿದ್ದಾರೆ.

<><><><>

ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ೧೫೦ನೇ ಜನ್ಮ ವರ್ಷಾಚರಣೆಯ ಸ್ಮರಣಾರ್ಥ ನವದೆಹಲಿಯಲ್ಲಿಂದು ಸರ್ದಾರ @೧೫೦ ಏಕತಾ ಓಟಕ್ಕೆ ಕೇಂದ್ರ ಸಚಿವ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಸಿರುನಿಶಾನೆ ತೋರಿದರು. ಇದೇ ವೇಳೆ ಮಾತನಾಡಿದ ಅವರು, ಸರ್ದಾರ್ ಪಟೇಲರ ಪರಂಪರೆಗೆ ಗೌರವ ಸೂಚಿಸಲು ಸರಣಿ ಕಾರ್ಯಕ್ರಮಗಳನ್ನು

ಆಯೋಜಿಸಲಾಗುತ್ತಿದೆ. ದೇಶದ ವಿವಿಧ ಮಾರ್ಗಗಳಿಂದ ಆರಂಭವಾಗುವ ಐದು ಮೆರವಣಿಗೆಗಳು ಸರ್ದಾರ್ ಪಟೇಲರ್ ಜನ್ಮಸ್ಥಳದಲ್ಲಿ ಒಂದಾಗಲಿದೆ. ಅಲ್ಲಿಂದ ಗುಜರಾತ್‌ನ ಕೆವಾಡಿಯಾದೆಡೆಗೆ ಹತ್ತು ದಿನಗಳ ಪಾದಯಾತ್ರೆಗೆ ಚಾಲನೆ ದೊರೆಯಲಿದೆ. ರಾಷ್ಟ್ರವನ್ನು ಏಕ ಭಾರತ್ ಶ್ರೇಷ್ಠ ಭಾರತ್, ವಿಕಸಿತ ಭಾರತ್, ಆತ್ಮನಿರ್ಭರ್ ಭಾರತದೆಡೆಗೆ ಕೊಂಡೊಯ್ಯಲು ಯುವಕರಿಗೆ ಸ್ಫೂರ್ತಿ ನೀಡುವುದೇ ಸರ್ದಾರ್ ಪಟೇಲ್ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತೆ ಎಂದರು.

<><><><>

ಜಾಗತಿಕ ಸಂಘರ್ಷಗಳನ್ನು ನಿಭಾಯಿಸಲು ಇಂದಿನ ಹೊಸ ಜಗತ್ತಿಗೆ ಹೊಸ ವಿಶ್ವಸಂಸ್ಥೆ ಮತ್ತು ಅಂತಾರಾಷ್ಟ್ರೀಯ ವ್ಯವಸ್ಥೆಯ ಅಗತ್ಯವಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಲಖನೌನಲ್ಲಿ ನಿನ್ನೆ ನಡೆದ ವಿಶ್ವದ ಮುಖ್ಯ ನ್ಯಾಯಮೂರ್ತಿಗಳ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಇಸ್ರೇಲ್ - ಹಮಾಸ್ ಮತ್ತು ಉಕ್ರೇನ್ - ರಷ್ಯಾ ಸಂಘರ್ಷ, ಸುಡಾನ್‌ನಲ್ಲಿನ ಮಾನವೀಯ ಬಿಕ್ಕಟ್ಟು ಸೇರಿದಂತೆ ಹಲವು ಜಾಗತಿಕ ಸಂಘರ್ಷಗಳಲ್ಲಿ ವಿಶ್ವಸಂಸ್ಥೆ ಇನ್ನು ಹೆಚ್ಚು ಬಲವಾದ ಪಾತ್ರವನ್ನು ವಹಿಸಬಹುದಿತ್ತು. ವಿಶ್ವಸಂಸ್ಥೆಯ ಸೀಮಿತ ಪಾತ್ರಕ್ಕೆ ಜಾಗತಿಕ ರಾಜಕೀಯ ಸಂಕೀರ್ಣತೆ, ಪ್ರಮುಖ ಶಕ್ತಿಗಳ ಪ್ರಭಾವ ಮತ್ತು ಸಾಂಸ್ಥಿಕ ಪ್ರಕ್ರಿಯೆಗಳು ತೆಗೆದುಕೊಳ್ಳುವ ಸಮಯ ಕಾರಣವಾಗಿದೆ ಎಂದಿದ್ದಾರೆ.

***ಧ್ವನಿ***ರಾಜನಾಥ್ ಸಿಂಗ್

<><><><>

೫೬ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ - ಇಫೀ ಇಂದು ಮೂರನೇ ದಿನಕ್ಕೆ ಕಾಲಿಟ್ಟಿದ್ದು, ಚಲನಚಿತ್ರ, ಪ್ರತಿಭೆ ಮತ್ತು ಜಾಗತಿಕ ಭಾಗವಹಿಸುವಿಕೆಯ ಸಮ್ಮಿಲನವನ್ನು ಪ್ರದರ್ಶಿಸುತ್ತಿದೆ. ವ್ಯಾಲೆಂಟಿನಾ ಬರ್ಟಿನಿ ಮತ್ತು ನಿಕೋಲ್ ಬರ್ಟಿನಿ ಅವರ ಇಟಾಲಿಯನ್ ಚಲನಚಿತ್ರ, ಮಸ್ಕಿಟೋಸ್; ಜಾಫರ್ ಪನಾಹಿ ಅವರ 'ಇಟ್ ವಾಸ್ ಜಸ್ಟ್ ಆನ್ ಆಕ್ಸಿಡೆಂಟ್', ಸೂರ್ಯ ಬಾಲಕೃಷ್ಣನ್ ಅವರ 'ದೀಪಾ ದೀದಿ' ಮತ್ತು ದೇಬಂಗ್ಕರ್ ಬೋರ್ಗೋಹೈನ್ ಅವರ ಅಸ್ಸಾಮಿ ಚಲನಚಿತ್ರ 'ಸಿಕಾರ್' ಇಂದು ಪ್ರದರ್ಶನಗೊಳ್ಳಲಿರುವ ಕೆಲವು ಪ್ರಮುಖ ಚಲನಚಿತ್ರಗಳಾಗಿವೆ.

<><><><>

ಸಿಡ್ನಿಯಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್‌ನ ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಲಕ್ಷ್ಯ ಸೇನ್, ಫೈನಲ್ ಪ್ರವೇಶಿಸಿದ್ದಾರೆ. ಸೆಮಿಫೈನಲ್ ಪಂದ್ಯದಲ್ಲಿಂದು ಅವರು, ತೈವಾನ್ ಆಟಗಾರ ಚೌ ಟಿಯೆನ್-ಚೆನ್ ಅವರನ್ನು ಅವರನ್ನು ೧೭-೨೧, ೨೪-೨೨, ೨೧-೧೯ ಸೆಟ್‌ಗಳ ಅಂತರದಲ್ಲಿ ಮಣಿಸಿದರು. ಇಂದು ಮಧ್ಯಾಹ್ನ ನಡೆಯುವ ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಜಪಾನ್‌ನ ಯೂಶಿ ತನಕ ಮತ್ತು ತೈವಾನ್‌ನ ಲಿನ್ ಚುನ್ ಯಿ ಮುಖಾಮುಖಿಯಾಗಲಿದ್ದು, ಈ ಪಂದ್ಯದಲ್ಲಿ ಗೆಲುವು ಸಾಧಿಸುವವರ ವಿರುದ್ಧ ಲಕ್ಷ್ಯ ಸೇನ್ ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿದ್ದಾರೆ. ಭಾರತದ ಇತರ ಆಟಗಾರರು ಈಗಾಗಲೇ ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ.

<><><><>

ಗುವಾಹತಿಯ ಬರ್ಸಾಪರ ಕ್ರಿಕೆಟ್ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಟೆಸ್ಟ್ ಕ್ರಿಕೆಟ್ ಸರಣಿಯ ಎರಡನೇ ಮತ್ತು ಅಂತಿಮ ಪಂದ್ಯದಲ್ಲಿ ಭಾರತ ಹಾಗೂ ದಕ್ಷಿಣ ಆಫ್ರಿಕಾ ಮುಖಾಮುಖಿಯಾಗಿವೆ. ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡಿರುವ ದಕ್ಷಿಣ ಆಫ್ರಿಕಾ ಇತ್ತೀಚಿನ ವರದಿ ಬಂದಾಗ ೨ ವಿಕೆಟ್ ನಷ್ಟಕ್ಕೆ ೧೪೮ ರನ್ ಗಳಿಸಿದೆ.

<><><><>

ಏಷ್ಯಾ - ಪೆಸಿಫಿಕ್ ಪ್ರದೇಶದಾದ್ಯಂತ ವಿಪತ್ತು ಮತ್ತು ಹವಾಮಾನ ಆಪತ್ತುಗಳನ್ನು ಕಡಿಮೆ ಮಾಡಲು ಏಷ್ಯಾ ಮತ್ತು ಪೆಸಿಫಿಕ್ ವಿಪತ್ತು ಮಾಹಿತಿ ನಿರ್ವಹಣಾ ಅಭಿವೃದ್ಧಿ ಕೇಂದ್ರ ಎಪಿಡಿಐಎಂ ಮತ್ತು ಪ್ರಾದೇಶಿಕ ಪಾಲುದಾರರೊಂದಿಗೆ ನಿಕಟವಾಗಿ ಕೆಲಸ ಮಾಡುವ ಬದ್ಧತೆಯನ್ನು ಭಾರತ ಪುನರುಚ್ಚರಿಸಿದೆ.

<><><><>

ಭಾರತೀಯ ನೌಕಾಪಡೆಯ ಸೂಕ್ಷ್ಮ ಗುಪ್ತಚರ ಮಾಹಿತಿಯನ್ನು ವಾಟ್ಸಾಪ್ ಮತ್ತು ಫೇಸ್‌ಬುಕ್ ಮೂಲಕ ಪಾಕಿಸ್ತಾನಕ್ಕೆ ರವಾನಿಸಿದ ಆರೋಪದ ಮೇಲೆ ಕರ್ನಾಟಕದ ಉಡುಪಿ ಪೊಲೀಸರು ಇಬ್ಬರು ವ್ಯಕ್ತಿಗಳನ್ನು ಬಂಧಿಸಿದ್ದಾರೆ. ಆರೋಪಿಗಳು ಕೊಚ್ಚಿನ್ ಶಿಪ್‌ಯಾರ್ಡ್‌ನಲ್ಲಿ ಉದ್ಯೋಗಿಗಳಾಗಿದ್ದು, ಕೊಚ್ಚಿನ್ ಶಿಪ್‌ಯಾರ್ಡ್‌ನ ಸಿಇಒ ಮಲ್ಪೆ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿದೆ. ಸ್ಥಳೀಯ ನ್ಯಾಯಾಲಯವು ಡಿಸೆಂಬರ್ ೩ ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

<><><>

ಗಡಿಯಾಚೆಗಿನ ಪಾವತಿಗಳನ್ನು ಉತ್ತೇಜಿಸಲು ಇತರ ನ್ಯಾಯವ್ಯಾಪ್ತಿಗಳ ವೇಗದ ಪಾವತಿ ವ್ಯವಸ್ಥೆಗಳೊಂದಿಗೆ ಏಕೀಕೃತ ಪಾವತಿ ವ್ಯವಸ್ಥೆಯನ್ನು ಪರಸ್ಪರ ಜೋಡಿಸುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಘೋಷಿಸಿದೆ. ಈ ಉಪಕ್ರಮಗಳು ಗಡಿಯಾಚೆಗಿನ ಪಾವತಿಗಳನ್ನು ಹೆಚ್ಚಿಸಲು, ಅಗ್ಗದ, ಹೆಚ್ಚು ಪರಿಣಾಮಕಾರಿ, ಪಾರದರ್ಶಕ ಮತ್ತು ಪ್ರವೇಶಿಸಬಹುದಾದ ರವಾನೆಗಳ ಮೇಲೆ ಕೇಂದ್ರೀಕರಿಸಲು ಜಿ-೨೦ ಮಾರ್ಗಸೂಚಿಯೊಂದಿಗೆ ಹೊಂದಿಕೆಯಾಗುತ್ತವೆ. ಯುರೋಸಿಸ್ಟಮ್ ನಿರ್ವಹಿಸುವ ತ್ವರಿತ ಪಾವತಿ ವ್ಯವಸ್ಥೆಯಾದ ಟಾರ್ಗೆಟ್ ತ್ವರಿತ ಪಾವತಿ ಸೆಟಲ್ಮೆಂಟ್ ನೊಂದಿಗೆ ಯುಪಿಐ ಅನ್ನು ಸಂಪರ್ಕಿಸುವ ಉಪಕ್ರಮದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಎನ್‌ಪಿಸಿಐ ಇಂಟನ್ರ್ಯಾ?ನಲ್ ಪೇಮೆಂಟ್ಸ್ ಲಿಮಿಟೆಡ್ ಯುರೋಪಿಯನ್ ಸೆಂಟ್ರಲ್ ಬ್ಯಾಂಕ್‌ನೊಂದಿಗೆ ತೊಡಗಿಸಿಕೊಂಡಿವೆ.

<><><>

ಪಾಕಿಸ್ತಾನದ ಫೈಸಲಾಬಾದ್‌ನ ಮಲಿಕ್‌ಪುರ್ ಪ್ರದೇಶದಲ್ಲಿರುವ ರಾಸಾಯನಿಕ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ೨೦ ಮಂದಿ ಸಾವನ್ನಪ್ಪಿದ್ದು, ೭ ಮಂದಿ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಅಂಟು ತಯಾರಿಸುವ ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿದ್ದು, ಅದರ ಶಬ್ದ ನಗರದೆಲ್ಲೆಡೆ ಕೇಳಿಸಿದೆ. ಸ್ಥಳೀಯ ಮಾಧ್ಯಮ ವರದಿಗಳ ಪ್ರಕಾರ ೩೧ ರಕ್ಷಣಾ ವಾಹನಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ.

<><><>

ಇಂದೋರ್‌ನಲ್ಲಿ ನಡೆಯುತ್ತಿರುವ ಇಂಡಿಯನ್ ಓಪನ್ ಸ್ಕ್ವಾಶ್ ಪಂದ್ಯಾವಳಿಯ ಮಹಿಳಾ ವಿಭಾಗದ ಫೈನಲ್‌ನಲ್ಲಿಂದು ಭಾರತದ ಅನಹಟ್ ಸಿಂಗ್ ಮತ್ತು ಜೋಶ್ನಾ ಚಿನ್ನಪ್ಪ ಮುಖಾಮುಖಿಯಾಗಲಿದ್ದಾರೆ. ಸೆಮಿಫೈನಲ್‌ನಲ್ಲಿ ಅನಹಟ್, ಮೂರನೇ ಶ್ರೇಯಾಂಕಿತ ಐರ್ಲೆಂಡ್‌ನ ಹನ್ನಾ ಕ್ರೇಗ್ ಅವರನ್ನು ೧೧-೪, ೧೦-೧೨, ೯-೧೧, ೧೧-೭, ೧೧-೪ ಅಂತರದಲ್ಲಿ ಸೋಲಿಸಿದರೆ, ಜೋಶ್ನಾ, ಎರಡನೇ ಶ್ರೇಯಾಂಕಿತ ಈಜಿಪ್ಟ್‌ನ ನಾಡಿಯನ್ ಎಲ್ಹಮ್ಮಮಿ ಅವರನ್ನು ಮಣಿಸಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>